ಡಾ॥ ಹೆಚ್.ಸಿ.ಮಹದೇವಪ್ಪ: ಕಳುಹಿಸಿಕೊಡುತ್ತೇನೆ.

ಅರೆಕಾಲಿಕ ಶಿಕ್ಷಕರನ್ನು ಖಾಯಂಗೊಳಿಸುವುದು

18 (153)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪದವಿ ಪೂರ್ವ:ಪದವಿ ಕಾಲೇಜುಗಳಲ್ಲಿ ಅರೆಕಾಲಿಕ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವವರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಇವರುಗಳನ್ನು ಖಾಯಂಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಶಿಕ್ಷಣ ಸಚಿವರು):

ಅ) 1) ರಾಜ್ಯದ ಪದವಿ ಕಾಲೇಜುಗಳಲ್ಲಿ 1997-98ನೇ ಸಾಲಿನಲ್ಲಿ ಅರೆಕಾಲಿಕ ಉಪನ್ಯಾಸಕರು ಕರ್ತವ್ಯ ನಿರ್ವಹಿಸರುವುದಿಲ್ಲ.

2) ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ: 19. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಆ) ಸರ್ಕಾರ ಪದವಿ ಕಾಲೇಜುಗಳಲ್ಲಿರುವ ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸಲು ಸರ್ಕಾರಿ ಆದಿಸೂಚನೆ ಸಂಖ್ಯೆ:ಡಿಪಿಎಆರ್ 48 ಎಸ್ಆರ್ಇ 96 ದಿನಾಂಕ: 22-1-97ರಲ್ಲಿ ರಚಿಸಿದ್ದ ವಿಶೇಷ ನಿಯಮಾವಳಿಗಳನ್ನು ದಿನಾಂಕ: 15-12-97ರಂದು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅನೂರ್ಜಿತಗೊಳಿಸಿರುವುದರಿಂದ ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸಲು ಬರುವುದಿಲ್ಲ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆ	ಅರೆಕಾಲಿಕ ಉಪನ್ಯಾಸಕರ ಸಂಖ್ಯೆ
1.	ರಾಯಚೂರು ಜಿಲ್ಲೆ	4
2.	ಬೆಂಗಳೂರು ಗ್ರಾಮಾಂತರ ಜಿಲ್ಲೆ	2
3.	ಗುಲ್ಬರ್ಗಾ ಜಿಲ್ಲೆ	2
4.	ಮಂಡ್ಯ ಜಿಲ್ಲೆ	1
5.	ಕೋಲಾರ ಜಿಲ್ಲೆ	2
6.	ದಕ್ಷಿಣ ಕನ್ನಡ ಜಿಲ್ಲೆ	3
7.	ಕೊಡಗು ಜಿಲ್ಲೆ	2
8.	ಶಿವಮೊಗ್ಗ ಜಿಲ್ಲೆ	3

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ಕೇಳಿರುವ (ಆ) ಪ್ರಶ್ನೆಗೆ ಮಾನ್ಯಮಂತ್ರಿಗಳು ಕೆಎಟಿಯವರು ಸ್ಟೇ ಕೊಟ್ಟಿದ್ದರಿಂದ ಅವರನ್ನು ನಾವು ಖಾಯಂ ಮಾಡುವುದಕ್ಕಾಗುವುದಿಲ್ಲವೆಂದು ಉತ್ತರಿಸಿದ್ದಾರೆ. ಮಾನ್ಯ ಗೋವಿಂದೇಗೌಡರ ಕಾರಿಗೆ ಘೇರಾವು ಮಾಡಿದ್ದರು. ಹೊಸ ಕಾಲೇಜುಗಳನ್ನು ಪ್ರಾರಂಭ ಮಾಡಿದರೆ ಅಲ್ಲಿ ಉಪನ್ಯಾಸಕರು ಇಲ್ಲ. ಮತ್ತು ಹಿಂದೆ ಇದ್ದ ಕಾಲೇಜುಗಳಲ್ಲಿ ಸಹ ಉಪನ್ಯಾಸಕರಿಲ್ಲ. ಹೀಗಾಗಿ, ಉಪನ್ಯಾಸಕರ ಕೊರತೆ ತೀವ್ರವಾಗಿರತಕ್ಕ ಪರಿಸ್ಥಿತಿ ಇದೆ. ಮೊನ್ನೆ ಪರೀಕ್ಷೆ ಬರೆಯಲಿಕ್ಕೆ ಕೂಡ ಉಪನ್ಯಾಸಕರಿರದಂತಹ ಪರಿಸ್ಥಿತಿಯಲ್ಲಿ, ನೀವು ಕೆಎಟಿ ಕೊಟ್ಟ ಸ್ಟೇಯನ್ನು ಮುಂದೆ ಮಾಡಿಕೊಂಡು ಉಪನ್ಯಾಸಕರ ಕೊರತೆಯನ್ನು ಯಾವ ರೀತಿಯಲ್ಲಿ ಪರಿಷ್ಕಾರ ಮಾಡುತ್ತೀರಿ? ಅದನ್ನು ಮುಂದಿಟ್ಟು ಮಾಡಬಾರದೆಂದಿದ್ದೀರಾ? ಅಥವಾ ಇವತ್ತು ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಪರಿಸ್ಥಿತಿ ಏನು? ಅದಕ್ಕೆ ಮುಂದಿನ ಕ್ರಮಗಳನ್ನೇನಾದರೂ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಪದವಿಪೂರ್ವ ಕಾಲೇಜು ಮತ್ತು ಕಾಲೇಜುಗಳಲ್ಲಿ ಉಪನ್ಯಾಸಕರನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ನೇಮಕ ಮಾಡಿದ್ದರು. ಒಂದು ವರ್ಷದ ಹಿಂದೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಯಾರ್ಯಾರು ಇದ್ದರು ಅವರನ್ನೆಲ್ಲ ತೆಗೆದಿರುವುದರಿಂದ, ಪುನಃ ಅವರನ್ನು ನೇಮಕ ಮಾಡಿಕೊಳ್ಳಬೇಕೆಂಬ ಬಗ್ಗೆ ಪ್ರೊಸೆಸ್ ಮಾಡಿದೆವು. 1993-94, 94-95ರ ಅವಧಿಗೆ 2-2 ವರ್ಷಗಳಲ್ಲಿ ಯಾರ್ಯಾರು ಕಾಲೇಜಿನಲ್ಲಿ ಕೆಲಸ ಮಾಡಿರುವ ಉಪನ್ಯಾಸಕರಿದ್ದಾರೆ, ಅವರನ್ನೆಲ್ಲ ನೇಮಕ ಮಾಡಿಕೊಳ್ಳಬೇಕೆಂದು ಪ್ರೊಸೆಸ್ ಮಾಡಿದೆವು. ಪ್ರೊಸೆಸ್ ಆಗಿ 2 ವರ್ಷಗಳು ಜನರಲ್ ಎಸ್‌ಸಿ/ಎಸ್‌ಟಿಗೆ 1 ವರ್ಷ ಎಂದು ನಿಗದಿಪಡಿಸಿ, ಅವರನ್ನೆಲ್ಲಾ ಪರ್ಮನೆಂಟ್ ಮಾಡಿಕೊಳ್ಳುವ ವ್ಯವಸ್ಥೆಯಾಗಿತ್ತು. ಅಷ್ಟರಲ್ಲಿ ಕೋರ್ಟ್‌ನಲ್ಲಿ ಸ್ಟೇ ಕೊಟ್ಟರು. ಆದ್ದರಿಂದ, ಇದನ್ನು ಸಂಪೂರ್ಣ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಸ್ಟೇ ಬಂದರೂ ನಾವು ಅದರ ಬಗ್ಗೆ ಹೈಕೋರ್ಟಿಗೆ ಹೋದೆವು. ಅದರ ಬಗ್ಗೆ ಇದುವರೆಗೆ ಯಾವ ತೀರ್ಮಾನವೂ ಆಗಿಲ್ಲ, ಕೇಸ್ ಪೆಂಡಿಂಗ್ ಇದೆ. ನೀವು ಹೇಳುತ್ತಿರುವ ವಿಷಯದ ಬಗ್ಗೆ ನನಗೆ ಅನುಭವವಿದೆ. ಪದವಿಪೂರ್ವ ಕಾಲೇಜುಗಳಲ್ಲಿ ಲೆಕ್ಚರರ್ ಸಂಖ್ಯೆ ಕಡಿಮೆ ಇದೆ, ಪಿಯೂಸಿಯಲ್ಲೂ ಕಡಿಮೆ ಇದೆ. ಇದಕ್ಕಾಗಿ ನಾವು ತಾತ್ಕಾಲಿಕವಾಗಿ ಗೆಸ್ಟ್ ಲೆಕ್ಚರರ್ಸ್‌ನ್ನು ಒಂದು ಗಂಟೆಗೆ 100 ರೂಪಾಯಿನಂತೆ ಕೊಟ್ಟು ಅಪಾಯಿಂಟ್ ಮಾಡಿಕೊಳ್ಳಬೇಕೆಂದು ಈಗಾಗಲೇ ಆದೇಶ ಕಳುಹಿಸಿದ್ದೇವೆ. ಹೈಕೋರ್ಟ್ ಡಿಸಿಷನ್ ಬಂದ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ. ಕೋರ್ಟಿನಲ್ಲಿ ಡಿಲೇ ಆಗುವುದರಿಂದಾಗಿ ನಾವು ಯಾವುದೇ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಆಗುತ್ತಿಲ್ಲ. ಕಷ್ಟ ಏನಿದೆ ಎಂಬ ಅರಿವು ಸರ್ಕಾರಕ್ಕಿದೆ. ಆದುದರಿಂದ, ಆದಷ್ಟು ಜಾಗ್ರತೆಯಾಗಿ ಇದನ್ನು ವೆಕೇಟ್ ಮಾಡಿಸಿ, ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆಂಬ ಭರವಸೆಯನ್ನು ನಾನು ತಮಗೆ ಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಕೆಎಟಿ ಸ್ಟೇ ಕೊಟ್ಟಿರುವುದು ಕೇವಲ

17 ಜನರಿಗೆ ಮಾತ್ರ. ನೀವೇ ಉತ್ತರ ಕೊಟ್ಟಿದ್ದೀರಿ. ಅರೆಕಾಲಿಕೆ ಉಪನ್ಯಾಸಕರ ಸಂಖ್ಯೆ ಜಿಲ್ಲಾವಾರು ಕೊಟ್ಟಿದ್ದೀರಿ. ಅದರಲ್ಲಿರತಕ್ಕದ್ದು 17 ಜನ ಮಾತ್ರ. ಆ 17 ಜನರಿಗೆ ಖಾಯಂ ಮಾಡಲಿಕ್ಕೆ ಕೆಎಟಿ ಸ್ಟೇ ಕೊಟ್ಟಿದೆ. ಹಾಗಾಗಿ ಇಡೀ ರಾಜ್ಯದಲ್ಲಿರುವ ಕಾಲೇಜುಗಳಲ್ಲಿ ಉಪನ್ಯಾಸಕರುಗಳ ಕೊರತೆಯನ್ನು ನೀಗಿಸಲಿಕ್ಕೆ ಇದು ಏಕೆ ಅಡ್ಡಿಯಾಗಬೇಕು? ನೀವು ಗೆಸ್ಟ್ ಲೆಕ್ಚರರ್ಸ್ ಎಂದು ಹೇಳುತ್ತಿದ್ದೀರಿ. ಗೆಸ್ಟ್ ಲೆಕ್ಚರರ್‌ಗಳನ್ನು ತೆಗೆದುಕೊಂಡು ಕೊರತೆಯನ್ನು ನೀಗಿಸುವುದಕ್ಕೆ ಖಂಡಿತಾ ಸಾಧ್ಯವಿಲ್ಲ. ಇದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಹುಡುಕಿ ಉಪನ್ಯಾಸಕರುಗಳನ್ನು ತುಂಬಲಿಕ್ಕೆ ಕ್ರಮ ತೆಗೆದುಕೊಳ್ಳದಿದ್ದರೆ ಹೇಗೆ? ನಿಮ್ಮ ವರದಿಯಲ್ಲಿ ಹೇಳಿದ್ದೀರಿ, ಏನು ಹೇಳಿದ್ದೀರಿ ಅಂದರೆ ವಿದ್ಯಾಭ್ಯಾಸಕ್ಕೆ ಬಹಳಷ್ಟು ಗಮನ ಕೊಟ್ಟಿದ್ದೇವೆಂದರೆ ಅದಕ್ಕೆ ಯಾವುದೇ ಅರ್ಥವಿರುವುದಿಲ್ಲ. ಒಂದೆರಡು ವರ್ಷಗಳಿಂದ ಕಾಲೇಜುಗಳಲ್ಲಿ ಶಿಕ್ಷಕರು ಇಲ್ಲ ಅದಕ್ಕೇನು ಮಾಡುತ್ತೀರಿ? ಇದರ ಬಗ್ಗೆ ನಿರ್ದಿಷ್ಟವಾಗಿ ಹೇಳಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ: 19 ಪದವಿಪೂರ್ವ ಕಾಲೇಜುಗಳಲ್ಲಿ ಕೆಲಸ ಮಾಡತಕ್ಕವರಿಗೆ ಈಗ ಆರ್ಡರ್ ಆಗಿಲ್ಲ, ಹಿಂದೆ ಆರ್ಡರ್ ಆಗಿದೆ. ಅವರಿಗೆ ಯಾವುದೇ ರೀತಿಯಲ್ಲಿ ತೊಂದರೆ ಮಾಡಿಲ್ಲ. ಹೈಕೋರ್ಟ್‌ನಲ್ಲಿ ಈ ರೀತಿ ತೀರ್ಮಾನವಾಗಿರುವುದರಿಂದ ಮುಂದೆ ನಾವು ಏನಾದರೂ ಮಾಡಿ ಉಪನ್ಯಾಸಕರುಗಳನ್ನು ನೇಮಕ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ತಾತ್ಕಾಲಿಕವಾಗಿ ಗೆಸ್ಟ್ ಲೆಕ್ಚರರ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಅಕಾಡಮಿಕ್ ಇಯರ್ ಪ್ರಾರಂಭವಾದ ಮೇಲೆ ವ್ಯವಸ್ಥಿತವಾದ ಕ್ರಮವನ್ನು ತೆಗೆದುಕೊಂಡು ಉಪನ್ಯಾಸಕರುಗಳನ್ನು ನೇಮಕ ಮಾಡುವುದಕ್ಕೆ ಯಾವರೀತಿ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರ ಇದನ್ನು ಯೋಚನೆ ಮಾಡುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ನಾನು ಈ ಬಗ್ಗೆ ಮಾನ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಕಾಲೇಜುಗಳಲ್ಲಿ ಸೈನ್ಸ್ ವಿಭಾಗದಲ್ಲಿ ಒಂದೇ ಒಂದು ಪ್ರಾಕ್ಟಿಕಲ್ ಕ್ಲಾಸಸ್ ನಡೆದಿಲ್ಲ. ಬಯೋ ಕೆಮಿಸ್ಟ್ರಿ, ಮೈಕ್ರೋ ಬಯಾಲಜಿ ಇಂತಹ ಸಬ್ಜೆಕ್ಟ್‌ಗಳಿಗೆ ಒಬ್ಬರೂ ಉಪನ್ಯಾಸಕರು ಸಿಕ್ಕಿಲ್ಲ. ಚಿಕ್ಕನಾಯಕನಹಳ್ಳಿ ಇಂತಹ ಕಡೆಗಳಲ್ಲಿ ಒಬ್ಬರೂ ಉಪನ್ಯಾಸಕರು ಇಲ್ಲ. ಹೆಚ್ಚಿಗೆ ಇರುವ ಕಡೆ ಅವರುಗಳನ್ನು ಡೆಪ್ಯುಟೇಷನ್ ಸಹ ಮಾಡಿಲ್ಲ. ಈ ವರ್ಷ ಒಂದೂ ಪ್ರಾಕ್ಟಿಕಲ್ ಕ್ಲಾಸ್ ನಡೆದಿಲ್ಲ ಅಲ್ಲಿನ ವಿದ್ಯಾರ್ಥಿಗಳ ಸ್ಥಿತಿ ಏನು? ಪಬ್ಲಿಕ್ ಪರೀಕ್ಷೆಗೆ ಅವರು ಕೂಡಬೇಕು. ಸೈನ್ಸ್ ವಿಭಾಗದಲ್ಲಿ ಪ್ರಾಕ್ಟಿಕಲ್ ಕ್ಲಾಸಸ್ ನಡೆದೇ ಇಲ್ಲ, ಆ ಮಕ್ಕಳ ಭವಿಷ್ಯವೇನು? ಈ ವರ್ಷ ಅವರು ಪ್ರಾಕ್ಟಿಕಲ್ ಕ್ಲಾಸಸ್‌ಗೆ ಕೂರುವುದು ಹೇಗೆ? ಕನಿಷ್ಟ ಇಷ್ಟು ದಿವಸ ಪ್ರಾಕ್ಟಿಕಲ್ ಕ್ಲಾಸ್ ಅಟೆಂಡೆನ್ಸ್ ಇರಬೇಕೆಂದು ನಿಯಮ ಮಾಡಿದ್ದೀರಿ. ಉಪನ್ಯಾಸಕರು ಇಲ್ಲದಿದ್ದರೆ ಆಬ್ಸಲ್ಯೂಟ್‌ಲಿ ಸೊನ್ನೆ. ಫಸ್ಟ್ ಇಯರ್ ಸೆಕೆಂಡ್ ಇಯರ್ ತರ್ಡ್ ಇಯರ್ ಮೂರು ಇರುವ ಕಡೆ ಒಬ್ಬರೂ ಉಪನ್ಯಾಸಕರು ಇಲ್ಲ. ಅಲ್ಲಿಗೆ ಡೆಪ್ಯುಟೇಶನ್ ಕೂಡ ಮಾಡಿಕೊಟ್ಟಿಲ್ಲ.

ಇದ್ದವರನ್ನು ಕಂಟಿನ್ಯೂ ಸಹ ಮಾಡಲಿಲ್ಲ. ತಾವು ಹೇಳಿದ್ದೀರಿ ಇಲ್ಲಿ ಮತ್ತೆ ಅವರನ್ನು ತೆಗೆದುಕೊಳ್ಳುವುದಿಲ್ಲವೆಂದು. ತಾತ್ಕಾಲಿಕವಾಗಿ ಗೆಸ್ಟ್ ಲೆಕ್ಚರರ್ ತೆಗೆದುಕೊಂಡಿಲ್ಲ. ಈ ವರ್ಷ ಕಾಲೇಜುಗಳಲ್ಲಿ ಉಪನ್ಯಾಸಕರುಗಳೇ ಇಲ್ಲ. ತಾವು ನೇಮಕ ಮಾಡಿಕೊಳ್ಳುವುದು ಹಾಗೆ ಇರಲಿ. ಉಪನ್ಯಾಸಕರುಗಳೇ ಇಲ್ಲದಿದ್ದರೆ ಕಾಲೇಜುಗಳ ಗತಿಯೇನು? ಮಾನ್ಯಮಂತ್ರಿಗಳು ಇದರ ಬಗ್ಗೆ ಸ್ವಲ್ಪ ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಸದಸ್ಯರು ಹೇಳಿದಹಾಗೆ ಉಪನ್ಯಾಸಕರುಗಳನ್ನು ನೇಮಕ ಮಾಡಲಿಕ್ಕೆ ಕ್ಯಾಬಿನೆಟ್ ಡಿಸಿಷನ್ ಆಗಿದೆ ಅಲ್ಲಿರುವವರನ್ನು ಕಂಟಿನ್ಯೂ ಮಾಡುತ್ತೇವೆಂದು ಹೇಳಿದ್ದೆ. ಕೋರ್ಟ್‌ನಲ್ಲಿ ಈ ರೀತಿ ತೀರ್ಮಾನವಾಗುತ್ತದೆಂದು ನಮಗೆ ಗೊತ್ತಾಗಲಿಲ್ಲ. ಕೆಳಗಡೆ ಕೋರ್ಟಿನಲ್ಲಿ ಈ ರೀತಿ ತೀರ್ಮಾನವಾಗಿರುವುದು ಸರಿಯಿಲ್ಲವೆಂದು ಹೈಕೋರ್ಟ್‌ಗೆ ಹೋಗಿದ್ದೇವೆ. ಸುಪ್ರೀಂಕೋರ್ಟ್‌ಗೆ ಹೋಗುವುದಕ್ಕೂ ನಾವು ಸಿದ್ದರಿದ್ದೇವೆ. ಅದರ ಬಗ್ಗೆ ಸರ್ಕಾರ ಯಾವುದೇ ರೀತಿಯಲ್ಲಿ ಹಿಂದೆ ಬೀಳುವುದಿಲ್ಲ.

ಅಧ್ಯಕ್ಷರು: ಮಾನ್ಯ ಗೋವಿಂದೇಗೌಡರೆ, ಮಾನ್ಯಸದಸ್ಯರು ಹೇಳತಕ್ಕದ್ದು ಜನರಲ್ ಆಗಿ ಇಂಟೀರಿಯರ್ ಪ್ಲೇಸಸ್‌ನಲ್ಲಿ ಬಹಳ ವೆಕೆನ್ಸಿ ಇವೆ. ಆ ಹುದ್ದೆಗಳು ಫಿಲಪ್ ಆಗಿಲ್ಲ. ಅಕಾಡಮಿಕ್ ಇಯರ್ ಕ್ಲೋಸ್ ಆಗುತ್ತ ಬಂತು ಎಗ್ಸಾಮಿನೇಷನ್ ಮಾಡಬೇಕು, ಒಂದೂ ಪ್ರಾಕ್ಟಿಕಲ್ ಕ್ಲಾಸಸ್ ನಡೆದಿಲ್ಲ. ಆ ಕಾಲೇಜುಗಳ ವಿದ್ಯಾರ್ಥಿಗಳ ಭವಿಷ್ಯವೇನು ಎಂದು ಕೇಳುತ್ತಿದ್ದಾರೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ನಿಜ ಸ್ವಾಮಿ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವರು ಹೇಳತಕ್ಕದ್ದು ಎರಡು ವಿಷಯ ನಮಗೆ ಸ್ಪಷ್ಟವಾಗಬೇಕಾಗಿದೆ. ಮುಂದಿನ ಅಕಾಡಮಿಕ್ ಇಯರ್‌ಗೆ ಕ್ರಮ ತೆಗೆದುಕೊಳ್ಳುತ್ತೇವೆಂದರೆ, ಈಗ ಪರಿಸ್ಥಿತಿ ಪೂರಾ ಹದಗೆಟ್ಟಿದೆ. ಒಂದು ಕಾಲೇಜಿನಲ್ಲೂ ಲೆಕ್ಚರರ್ಸ್ ಇಲ್ಲ ಅದಕ್ಕೆ ಏನು ಮಾಡುತ್ತೀರಿ? ಕೆಎಟಿ ಸ್ಟೇ ಕೊಟ್ಟಿರುವುದು ಕನ್‌ಫರ್ಮ್ ಮಾಡುವುದಕ್ಕೆ ಮಾತ್ರ.

ಅಧ್ಯಕ್ಷರು: ಮಾನ್ಯ ರೆಡ್ಡಿಯವರೆ, ಮಾನ್ಯಮಂತ್ರಿಗಳು ನಿಮ್ಮ ಪಾಯಿಂಟ್ ಕ್ಯಾಚ್ ಮಾಡಲಿಲ್ಲ ನಾನು ಹೇಳುತ್ತೇನೆ ಕೇಳಿ. ಕರ್ನಾಟಕ ಲೋಕಸೇವಾ ಆಯೋಗದಿಂದ ಸುಮಾರು ಜನರನ್ನು ರಿಕ್ರೂಟ್ ಮಾಡಿದರು. ಅವರು ಅಪಾಯಿಂಟ್‌ಮೆಂಟ್ ಆರ್ಡರ್ ತೆಗೆದುಕೊಂಡ ತಕ್ಷಣ ಮೊದಲು ಶಾಸಕರ ಭವನಕ್ಕೆ ಬರುತ್ತಾರೆ. ನಮ್ಮ ಮತ್ತು ಮಂತ್ರಿಗಳ ಮನೆಗೆ ಬರುತ್ತಾರೆ ಟ್ರಾನ್ಸ್‌ಫರ್‌ಗೋಸ್ಕರ. ಲಿಂಗಸುಗೂರು ಅಂದರೆ ಅಲ್ಲಿಗೆ ಹೋಗುವುದಿಲ್ಲ. ಯಾದಗಿರಿಗೆ ಹಾಕಿದರೆ ಅಲ್ಲಿಗೆ ಹೋಗುವುದಿಲ್ಲ. ಎಲ್ಲರೂ

ಬೆಂಗಳೂರಿನಲ್ಲಿಯೇ ಇರಬೇಕು. ಚಿಕ್ಕನಾಯಕನಹಳ್ಳಿಗೆ ಹಾಕಿದರೂ ಹೋಗುವುದಿಲ್ಲ. ಎಲ್ಲರೂ ಬೆಂಗಳೂರಿಗೆ ಕೇಳುತ್ತಾರೆ. ತಾವು ಬೇಕಾದರೆ ಮಾಹಿತಿ ತರಿಸಿ ನೋಡಿ. ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಯಾದ ಡಾಕ್ಟರುಗಳು ಮತ್ತು ಲೆಕ್ಚರರ್‌ಗಳು ಫಸ್ಟ್ ಅಪಾಯಿಂಟ್‌ಮೆಂಟ್‌ನಲ್ಲಿ ಎಷ್ಟು ಶಿಫಾರಸ್ಸುಗಳನ್ನು ತೆಗೆದುಕೊಂಡು ಹೋಗಿದ್ದಾರೆ ಎನ್ನುವುದನ್ನು ತರಿಸಿನೋಡಿದರೆ ಗೊತ್ತಾಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ತಾವು ಹೇಳತಕ್ಕದ್ದು ನಿಜ. ಕೆಎಟಿ ಸ್ಟೇ ಕೊಟ್ಟಿರುವುದು ಕನ್‌ಫರ್ಮ್ ಮಾಡುವ ವಿಷಯಕ್ಕೆ.

ಅಧ್ಯಕ್ಷರು: ಈ ಹೌಸ್‌ನಲ್ಲಿ ಒಂದು ತೀರ್ಮಾನ ಮಾಡಿ. ಕೆಇಬಿ ವಿಷಯದಲ್ಲೂ ನಾನು ಈ ಮಾತು ಹೇಳಿದ್ದೆ. ಫಸ್ಟ್ ಅಪಾಯಿಂಟ್‌ಮೆಂಟ್ ಆದವರು ಕೊಟ್ಟ ಜಾಗಕ್ಕೆ ಪೋಸ್ಟಿಂಗ್ ತೆಗೆದುಕೊಳ್ಳದಿದ್ದರೆ ಯಾವುದೇ ಕಾರಣದಿಂದ ಶಿಫಾರಸ್ಸಿಗೆ ಬಂದರೆ ಅವರು ಜಾಬ್ ಕಳೆದುಕೊಳ್ಳುತ್ತಾರೆನ್ನುವ ಪ್ರಚಾರ ಮಾಡಿಸಿ, ಟರ್ಮಿನೇಟ್ ಮಾಡುತ್ತೇವೆಂದು ಹೇಳಿ ಆಗ ನೋಡೋಣ. ಬೆಂಗಳೂರಿನ ಸುತ್ತಮುತ್ತ ಇರತಕ್ಕವರು ಸೆಲೆಕ್ಟ್ ಆಗುತ್ತಾರೆ ಬೀದರ್, ರಾಯಚೂರು ಗುಲ್ಬರ್ಗಾಕ್ಕೆ ಹೋಗಿ ಅಂದರೆ ಹೋಗುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಮ್ಮ ಕೋಲಾರಕ್ಕೆ ಬರುವುದಿಲ್ಲ. ಅದನ್ನು ನಾವು ಒಪ್ಪುತ್ತೇವೆ. ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಪರೀಕ್ಷೆಯ ಕಾಲ ಬಹಳ ಹತ್ತಿರದಲ್ಲಿದೆ. ಉಪನ್ಯಾಸಕರಾಗಿರುವವರ ಹತ್ತಿರ ಕೆಲಸ ಮಾಡಿಸಿ, ತಕ್ಷಣ ಏನಾದರೂ ಒಂದು ತಾತ್ಕಾಲಿಕ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಕೆಳಗಿನ ಕೋರ್ಟ್ ಆರ್ಡರ್ ಸರಿಯಿಲ್ಲವೆಂದು ಹೈಕೋರ್ಟ್‌ನಲ್ಲಿ ನಾವು ಅಪೀಲ್ ಮಾಡಿದ್ದೇವೆ. ಹೈಕೋರ್ಟ್ ಡಿಸಿಷನ್ ಪೆಂಡಿಂಗ್ ಇದೆ. ತಾತ್ಕಾಲಿಕವಾಗಿ ಗೆಸ್ಟ್ ಲೆಕ್ಚರರ್ ಒಂದು ಗಂಟೆಗೆ ಒಂದು ನೂರು ರೂಪಾಯಿ ಅದರಂತೆ ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಅನೇಕ ಕಡೆ ನಾನು ನೋಡಿದ್ದೇನೆ ಕೆಲವು ಕಡೆ ತಾವು ಹೇಳತಕ್ಕದ್ದು ನಿಜ. ಅದು ನನಗೆ ಗೊತ್ತಿದೆ. ಸರ್ಕಾರದವರು ಇದರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ಆದಷ್ಟು ಜಾಗ್ರತೆ ಅವರನ್ನು ಕನ್‌ಫರ್ಮ್ ಮಾಡಬೇಕೆಂದು ಮಾಡಿದ್ದೇವೆ. ಕೋರ್ಟ್‌ನಲ್ಲಿ ಈ ತರಹ ಡಿಸೀಷನ್ ಆಗಿದ್ದರಿಂದ ತಡವಾಗಿದೆ. ಆಕಸ್ಮಾತ್ ಎಲ್ಲಿಯಾದರೂ ಹೆಚ್ಚು ಜನರು ಇದ್ದ ಕಡೆ ನಾವು ಡೆಪ್ಯುಟೇಷನ್ ಮಾಡಿದ್ದೇವೆ. ಉಪನ್ಯಾಸಕರನ್ನು ಡೆಪ್ಯುಟೇಷನ್ ಮಾಡತಕ್ಕ ಕ್ರಮವನ್ನು ತೆಗೆದುಕೊಂಡಿದ್ದೇವೆ. ಸಧ್ಯದ ಪರಿಸ್ಥಿತಿಯಲ್ಲಿ ಗೆಸ್ಟ್ ಲೆಕ್ಚರರ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಡಾಕ್ಟರುಗಳನ್ನು ಅಪಾಯಿಂಟ್‌ಮೆಂಟ್

ಮಾಡಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಹಾಗೆ ನೀವು ಉಪನ್ಯಾಸಕರು ಮತ್ತು ಟೀಚರ್ಸ್‌ಗಳನ್ನು ನೇಮಕ ಮಾಡಲಿಕ್ಕೆ ಡಿಡಿಪಿಐ ಅವರಿಗೆ ಅಧಿಕಾರ ಕೊಟ್ಟು ತಕ್ಷಣ ಫಿಲಪ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಿ.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಆ ಪ್ರಪೋಸಲ್ಸ್‌ನ್ನು ಎಗ್ಸಾಮಿನ್ ಮಾಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಪ್ರಾಕ್ಟಿಕಲ್ ಕ್ಲಾಸಸ್‌ಗೆ ಹೋಗಿಲ್ಲದಿರುವವರಿಗೆ ಅದನ್ನು ಎಕ್ಸಮ್ಪ್ ಮಾಡಬೇಕು. ಟೀಚರ್ಸ್ ಇಲ್ಲ ಪ್ರಾಕ್ಟಿಕಲ್ ಕ್ಲಾಸ್ ಮಾಡಿಲ್ಲ. ಅಂತಹ ಮಕ್ಕಳನ್ನು ಪರೀಕ್ಷೆಗಳಿಗೆ ಕೂರಿಸದಿದ್ದರೆ ಗತಿಯೇನು?

ಅಧ್ಯಕ್ಷರು: ಇದು ಉಪಯುಕ್ತವಾದ ಸಲಹೆ. ಏಕೆಂದರೆ ಪ್ರಾಕ್ಟಿಕಲ್ ಕ್ಲಾಸ್ ಮಾಡದೆ ಪರೀಕ್ಷೆಗೆ ಕೂರಿಸಿದರೆ ಆ ಹುಡುಗರು ಏನು ಮಾಡುತ್ತಾರೆ? ಅವರಿಗೆ ಆಲ್ಟರ್‌ನೇಟ್ ಅರೇಂಜ್‌ಮೆಂಟ್ ಮಾಡುವುದೋ ಅವರಿಗೆ ಎಗ್ಸೆಂಪ್‌ಷನ್ ಕೊಡುವುದೋ ಏನೋ ಮಾಡಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಗೆಸ್ಟ್ ಲೆಕ್ಚರರ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಪ್ರಾಂಶುಪಾಲರುಗಳಿಗೆ ಅಧಿಕಾರ ಕೊಟ್ಟಿದ್ದೇವೆ. ಆಯಾಯ ಕಾಲೇಜುಗಳಲ್ಲಿ ಪ್ರಾಂಶುಪಾಲರು ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿದ್ದೇವೆ.

ಅಧ್ಯಕ್ಷರು: ಮಾನ್ಯ ಮಾಧುಸ್ವಾಮಿಯವರು ಕೇಳತಕ್ಕದ್ದು ಯಾವ ಮಕ್ಕಳಿಗೆ ಪ್ರಾಕ್ಟಿಕಲ್ ಕ್ಲಾಸಸ್ ನಡೆದಿಲ್ಲ ಅವರು ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಹೇಗೆ ಕುಳಿತುಕೊಳ್ಳುತ್ತಾರೆ? ಅದನ್ನು ಎಕ್ಸ್‌ಮ್ಪ್ ಮಾಡಿಯೆಂದು ಕೇಳುತ್ತಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನೀವು ಟೀಚರ್ಸ್ ಕೊಡಲಿಲ್ಲ ಅಲ್ಲಿ ಪ್ರಾಕ್ಟಿಕಲ್ ಕ್ಲಾಸಸ್ ನಡೆದಿಲ್ಲ. ಅರ್ಹತೆ ಇಲ್ಲದೆ ಪಾಸಾಗುವುದು ಅಂದರೆ ಗತಿಯೇನು? ಅದು ನಿಮ್ಮ ಜವಾಬ್ದಾರಿ. ಪ್ರಾಕ್ಟಿಕಲ್ ಕ್ಲಾಸ್ ನಡೆದಿಲ್ಲ, ಪರೀಕ್ಷೆಗೆ ಹೋಗುವುದಕ್ಕೆ ಅರ್ಹತೆಯಿಲ್ಲವೆಂದರೆ ಆ ಮಕ್ಕಳ ಗತಿಯೇನು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಹಿಂದೆ 7ನೇ ತರಗತಿಗೆ ಪಬ್ಲಿಕ್ ಎಗ್ಸಾಮ್ ಮಾಡಿದಿರಿ. ಹಿಂದಿ ಮೇಸ್ಟ್ರುಗಳನ್ನು ಕೊಡಲಿಲ್ಲ. ಹಿಂದಿ ಕಂಪಲ್ಸರಿ ಇಲ್ಲವೆಂದು ಹೇಳಿದಿರಿ. ಆಮೇಲೆ ಹಿಂದಿಯಲ್ಲಿ ಎಲ್ಲರನ್ನು ಫೇಲ್ ಮಾಡಿದಿರಿ. ಕಾಲೇಜುಗಳಲ್ಲಿ ಪ್ರಾಕ್ಟಿಕಲ್ ಕ್ಲಾಸಸ್ ನಡೆದಿಲ್ಲ ಅವರು ಪರೀಕ್ಷೆಯಲ್ಲಿ ಫೇಲಾದರೆ ಯಾರಿಗೆ ನಷ್ಟ?

ಅಧ್ಯಕರು: ಮಾನ್ಯ ಮಾಧುಸ್ವಾಮಿಯವರೆ ತಾವು ಸೈನ್ಸ್ ಸಬ್ಜೆಕ್ಟ್ ಸ್ಟಡಿ ಮಾಡಿದ್ದೀರಿ ಎಂದು ಕಾಣುತ್ತದೆ ತಾವು ಸ್ವಲ್ಪ ಸಹಾಯ ಮಾಡಬಹುದಲ್ಲ ವಿದ್ಯಾರ್ಥಿಗಳಿಗೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಟೈಮ್ ಮೀರಿ ಹೋಗಿದೆ. ಜನರನ್ನು ಕರೆದು ಪಾಠ

ಮಾಡುವುದಕ್ಕೆ ಹೇಳಿದ್ದೇನೆ. ಟರ್ಮ್ ಡೇಸ್ ಪ್ರಾಬ್ಲಮ್ ಇದೆ. 16ರಿಂದ ಪರೀಕ್ಷೆ ಶುರುಮಾಡುತ್ತಿದ್ದಾರೆ. ಒಂದೂ ಪ್ರಾಕ್ಟಿಕಲ್ ಕ್ಲಾಸ್ ಆಗಿಲ್ಲ. ಚಿಕ್ಕನಾಯಕನಹಳ್ಳಿ ಕಾಲೇಜಿನ ವಿದ್ಯಾರ್ಥಿಗಳ ಗತಿಯೇನು?

ಅಧ್ಯಕ್ಷರು: ಈಗ ಕೊಶ್ಚನ್ ಅವರ್ ಈ ರೀತಿಯಾದರೆ ಡೆಡ್‌ಲಾಕ್ ಆಗುತ್ತದೆ.

ಶ್ರೀ ಜೆ.ಸಿ.ಬಾಧುಸ್ವಾಮಿ: ಅದನ್ನು ಎಕ್ಸಮ್ಪ್ ಮಾಡುವುದಕ್ಕೆ ಹೇಳಿ.

ಶ್ರೀ ಐ.ಎಂ.ಜಯರಾಮಶೆಟ್ಟಿ: ಬೈಂದೂರಿನ ಪದವಿಪೂರ್ವ ಕಾಲೇಜಿನಲ್ಲಿ 75 ಪರ್ಸೆಂಟ್ ಲೆಕ್ಚರರ್ಸ್ ಇಲ್ಲ. ನಾನು ಈ ಬಗ್ಗೆ 25 ಲೆಟರ್ ಹಾಕಿದ್ದೇನೆ. ವಿದ್ಯಾರ್ಥಿಗಳು ಮುಷ್ಕರ ಮಾಡಿದ್ದಾರೆ. ಈ ರೀತಿಯಾದರೆ ಆ ಮಕ್ಕಳ ಭವಿಷ್ಯವೇನು?

ಅಧ್ಯಕ್ಷರು: ಮಾನ್ಯ ಗೋವಿಂದೇಗೌಡರೆ, ತಮ್ಮ ಅಧಿಕಾರಿಗಳನ್ನು ಕರೆದು ಎಲ್ಲೆಲ್ಲಿ ವೆಕೆನ್ಸೀಸ್ ಫಿಲಪ್ ಮಾಡಿಲ್ಲ ಅಲ್ಲಿ ಹೇಗೆ ಮಾಡಬೇಕೆನ್ನುವುದರ ಬಗ್ಗೆ ಆಲೋಚನೆ ಮಾಡಿ.

ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆ ಕಟ್ಟಡ ಉದ್ಘಾಟನೆಯಾಗದೇ ಇರುವುದು.

19(77)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆ ಆವರಣದಲ್ಲಿ ಪೂರ್ಣಗೊಂಡಿರುವ ಹೊಸ ಕಟ್ಟಡ ಉದ್ಘಾಟಿಸದೇ ಇರಲು ಕಾರಣವೇನು?

ಆ) ಈ ಆಸ್ಪತ್ರೆಯಲ್ಲಿ ಹಲವು ದರ್ಜೆಯ ಹುದ್ದೆಗಳು ಖಾಲಿ ಇದ್ದು ಭರ್ತಿ ಮಾಡದಿರಲು ಕಾರಣವೇನು?

ಇ) ಆಸ್ಪತ್ರೆಯ ಹೊಸ ಕಟ್ಟಡವನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಎಷ್ಟು ದಿನಗಳಲ್ಲಿ ಪ್ರಾರಂಭಿಸಲಾಗುವುದು?

ಡಾ॥ ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) ಕೆ.ಆರ್.ಆಸ್ಪತ್ರೆಯ ಆವರಣದಲ್ಲಿ ಕಟ್ಟಿರುವ ಹೊರ:ಒಳ ರೋಗಿಗಳ ನೂತನ ಕಟ್ಟಡದಲ್ಲಿ ವೈದ್ಯಕೀಯ ವಿಭಾಗವನ್ನು ಸ್ಥಳಾಂತರಿಸಿದ್ದು, ಸಾರ್ವಜನಿಕರ ಉಪಯೋಗಕ್ಕೆ ಬಳಸಲಾಗುತ್ತಿದೆ. ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ಬೇಕಾಗುವ ಅಗತ್ಯ ಸಲಕರಣೆಗಳು, ಉಪಕರಣಗಳು, ಶೇ.80ರಷ್ಟು ಸರಬರಾಜಾಗಿರುತ್ತದೆ. ಉಳಿದ ಉಪಕರಣಗಳಾದ